ಖಿ ಡಿ ಪ್ರ ತಿ ೩ ಹೈ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0
೧ ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ. ಪಿ. ಪದ್ಧತಿ ಇಲ್ಲ.
ಪ್ರಕಟಣೆ ದರವನ್ನು ಬೇಕಾದವರಿಗೆ ತಿಳಿಸುತ್ತೆ.

Office—Chamaraja Agrahar, Mysore
ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು

Regd. No. M. 1299

SATYAVADI

"ಸತ್ಯವಾದಿ" ವಾರಪತ್ರಿಕ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೨೯ ನೇ ಮೇ ೧೯೨೫. [ಸಂಚಿಕೆ ೨೩

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಿಮುರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು, ಅಜೀರ್ಣ, ಮಲಬದ್ದತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುಪ್ರದು ಕಾಬೂಲ್ ಕಾಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟ್ ಮೂಲಕ ಅದನ್ನು ಸಡೆಯಬಹುದು. 1 ಡಬ್ಬವನ್ನು 15 ದಿನಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವಾಗುವಂತೆ ಮಾಡುವುವು. ಅನುಪಾನ ಪತ್ರಿಕೆಯು ಸಂಗಡಲೇ ಇರುತ್ತೆ. ಹೆಸರು ವಿಳಾಸವಾಗಿ ತಿಳಿಯುವಂತೆ ಇರಬೇಕು.

ಯ ಡಬ್ಬಿ 1 ಕ್ಕೆ ರೂ. 2—0—0
ಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8
ವಿಜಂಟರು ಎಲ್ಲಾ ಸ್ಥಳಗಳಲ್ಲಿಯೂ
ವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ
ಳ್ಳಬಹುದು.

ಸ್—ಮಿಸ್ರಿ, ಬೆಂಗಳೂರು ಸಿಟಿ.
ಮನ್ನಾಲಾಲ್, ಡೆಲ್ಲಿ ವೈದ್ಯರು,
ಮಿಸ್ರಿ ಮುರಬ್ಬಾ ಡಿಪೋ,
ಗಳೂರು ಸಿಟಿ.

ಸೀಮೆ ಭಂಗಾತದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷ್ಟ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡ ಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಜೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತಮ್ಮಿಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಮಿ॥ ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಪರಿಮಳದ್ರವ್ಯಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD
For particulars apply to:—
THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನೆ ಕ್ರಯ 1 ಆಣೆ ಒಂದೊವರಾಣೆಯ ಸ್ಟಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಂಟಿಂಗ್ ಎಂಲಾರ್ಜಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 16-12 ಸೈಜು ಎಂಲಾರ್ಜುಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

—ಫ್ರಾನ್ಸು ದೇಶದಲ್ಲಿ ಹೆಂಗಸರು ಮಕ್ಕಳನ್ನು ಹೆರುವ ವಿಷಯದಲ್ಲಿ ಪ್ರಯಾಸಪಡದಿದ್ದಲ್ಲಿ, ಆ ಜನಾಂಗವು ಸಂಪೂರ್ಣವಾಗಿ ನಿರ್ಮೂಲವಾಗುವುದೆಂದು ಡಾ|| ಪಾಲ್ ಕಾರ್ನಟ್‌ರವರ ಅಭಿಪ್ರಾಯ. ಈಗ ಫ್ರಾನ್ಸಿನಲ್ಲಿ ಸುಮಾರು ೩,೦೦೦,೦೦೦ ಜನ ಮದುವೆಯಿಲ್ಲದಿರುವವರು, ಆದರೆ ಇವರು ಮಕ್ಕಳನ್ನು ಪಡೆಯಲು ಶಕ್ತರು. ಯುದ್ಧದನಿಮಿತ್ತ ಗಂಡಸರು ಮಡಿದಿದ್ದುದರಿಂದ ಅವರಿಗೆ ಗಂಡಂದಿರನ್ನು ಒದಗಿಸುವುದು ಸಾಧ್ಯವಿಲ್ಲ. ಯೂರೋಪಿನಲ್ಲೆಲ್ಲಾ ಗಂಡಸರಿಗಿಂತ ೧೫,೦೦೦,೦೦೦ ಮಂದಿ ಹೆಂಗಸರು ಹೆಚ್ಚಾಗಿರುವರು. ಫ್ರೆಂಚ್ ಹೆಂಗಸರನ್ನು ಇತರ ಜನಾಂಗದವರಿಗೆ ಮದುವೆಮಾಡುವ ಮತ್ತು ಒಬ್ಬ ಗಂಡಸೇ ಅನೇಕ ಹೆಂಗಸರನ್ನು ಮದುವೆಮಾಡಿಕೊಳ್ಳುವ ಏರ್ಪಾಡನ್ನು ಮೇಲ್ಕಂಡ ಡಾಕ್ಟರವರು ತಿರಸ್ಕರಿಸಿರುವರು. ಎರಡನೆಯ ಏರ್ಪಾಡನ್ನು ಅನುಮೋದಿಸದಿರುವುದಕ್ಕೆ ಅವರ ಕಾರಣವೇನೆಂದರೆ ಪ್ರಕೃತ ಸ್ಥಿತಿಯಲ್ಲಿ ಒಬ್ಬ ಗಂಡಸು ಒಬ್ಬ ಹೆಂಗಸಿಗಿಂತ ಹೆಚ್ಚಾಗಿ ಕಾಪಾಡಲು ಅಶಕ್ತನೆಂಬುದು. ಈ ವಿಷಯದಲ್ಲಿ ಮದುವೆಯನ್ನು ತೆಗೆದುಹಾಕಿಬಿಡಬೇಕೆಂದೂ, ಮತ್ತು ಮನೆಯಲ್ಲಿ ಸ್ತ್ರೀ ಯಾಜಮಾನ್ಯ ಮತ್ತು ಸರ್ಕಾರದವರು ಇವರಿಗೆ ಸಹಾಯಮಾಡಬೇಕೆಂದೂ, ಸಂಸಾರಕ್ಕೆ ಗಂಡಸಿನ ಆವಶ್ಯಕತೆಯಿಲ್ಲದೆ ಕೇವಲ ತಾಯಿಮಕ್ಕಳೇ ಸಂಸಾರವೆನ್ನಿಸಿಕೊಳ್ಳಬೇಕೆಂದೂ ಹೆಂಗಸು ಹೆತ್ತ ಪ್ರತಿ ಮಗುವಿಗೂ ಸರ್ಕಾರದವರು ಬಹುಮಾನಕೊಡಬೇಕೆಂದೂ ಡಾಕ್ಟರವರ ಅಭಿಪ್ರಾಯ.

—ಪ್ರಾಯಶಃ ಎಲ್ಲಾ ಕಡೆಯಲ್ಲಿಯೂ ಹಿಂದೂ ಮುಸಲ್ಮಾನರಿಗೆ ದಿಲ್‌ಸಫಾಯಿ ಜೆನ್ನಾಗಿಲ್ಲ ಎನ್ನುವ ವಿಷಯ ಎಲ್ಲರಿಗೂ ಗೊತ್ತೇ ಇದೆ. ಗುಲ್ಬರ್ಗಾದಲ್ಲಿ ನಡೆದ ವಿಷಯಗಳಂತೂ ಮರೆಯುವಹಾಗೇ ಇಲ್ಲ. ಆದರೂ ಅಲ್ಲಿನ ಕೆಲವು ಹಿಂದೂ ಮುಸಲ್ಮಾನ ದೊಡ್ಡ ಮನುಷ್ಯರು ಸೇರಿ ಉಭಯ ಪಕ್ಷದವರಿಗೂ ಸಮಾಧಾನ ಸ್ಥಿತಿಯನ್ನುಂಟು ಮಾಡುತ್ತಿರುವದು ಬಹಳ ಸ್ತೋತ್ರಾರ್ಹವಾಗಿದೆ. ಬಹುಜನಸಮಾಜದಲ್ಲಿ ಬ್ರಾಹ್ಮಣೇತರ ಜನಗಳಗುಂಪು ಜಾಸ್ತಿಯಾಗಿರುವದರಿಂದ ಸಮಾಜ ನೇತೃತ್ವವು ಬ್ರಾಹ್ಮಣೇತರ ಮುಂದಾಳುಗಳಮೇಲೆ ಬಿದ್ದಿರುವುದೇನಾಶ್ಚರ್ಯವಲ್ಲ ಮತ್ತು ಈ ವಿಷಯವಾಗಿ ಬ್ರಾಹ್ಮಣರು ಮ್ಯಸನ ಪಡಲು ಕಾರಣವಿಲ್ಲ. ರಾಷ್ಟ್ರ ಹಿತಕ್ಕಾಗಿ ಬ್ರಾಹ್ಮಣೇತರ ಪಂಗಡದವರು ನಿಷ್ಪಕ್ಷಪಾತದಿಂದ ಕೆಲಸಮಾಡಿದರೆ ಇದರಿಂದ ಎಲ್ಲರಿಗೂ ಕ್ಷೇಮವುಂಟಾಗಿ ಬ್ರಾಹ್ಮಣರಿಗೂ ಕ್ಷೇಮವುಂಟಾಗುವುದು. ಮತ್ತು ಎಲ್ಲರೂ ಸೇರಿ ಕೆಲಸಮಾಡುವುದರಿಂದ ದೇಶಕ್ಕೆ ಲಾಭ ಹೆಚ್ಚು!

—ಈಗಿನ ಕಾಲಸ್ಥಿತಿ ನೋಡಿದರೆ ಹಿಂದೆ ಇದ್ದ ನಡವಳಿಕೆಗಳನ್ನು ಬದಲಾಯಿಸದೇ ಹೋದರೆ ದೇಶದ ಕ್ಷೇಮವುಂಟಾಗುವುದಿಲ್ಲವೆಂಬ ಭಾವನೆ ಜನರಿಗೆ ಉಂಟಾಗಿರುವಂತೆ ತೋರುತ್ತೆ. ಈಗ ಇದು ಎಷ್ಟರಮಟ್ಟಿಗೆ ಫಲಿಸುತ್ತದೋ ನೋಡಬೇಕು. ಪ್ರಕೃತ ಬ್ರಾಹ್ಮಣೇತರ ಮತ್ತು ಬ್ರಾಹ್ಮಣರ ವಿವಾದವನ್ನು ತೆಗೆದುಕೊಳ್ಳೋಣ. ಬ್ರಾಹ್ಮಣೇತರ ಪಂಗಡದವರ ಅನ್ಯಾಯವನ್ನೂ ಮತ್ತು ಅವರ ಗುಲಾಮಗಿರಿಯನ್ನೂ ಸಹಿಸಲಾರದೆ ತಮ್ಮ ಸ್ವಂತ ಪಂಗಡದ ಅಭಿವೃದ್ಧಿಯನ್ನು ಮತ್ತು ಇಂಡಿಯಾದೇಶದ ಯೋಗಕ್ಷೇಮವನ್ನು ಕೈಗೊಂಡಿದ್ದಾರೆ. ಇವರು ಎಲ್ಲರಿಗೂ ತೃಪ್ತಿಯನ್ನುಂಟುಮಾಡಿದರೆ ಸಾಕು. ಇವರ ಅನ್ಯಾಯವೂ ಮತ್ತು ಗುಲಾಮಗಿರಿಯೂ ಬ್ರಾಹ್ಮಣೇತರ ಇತರರಿಗೆ ಅಸಮಾಧಾನವನ್ನುಂಟುಮಾಡಿದರೆ ಏನು ಜವಾಬು ಹೇಳುತ್ತಾರೋ ನೋಡಬೇಕು. ಹಿಂದಿನವರು ಮತ್ತು ಈಗಿನವರು ಈ ಮೂರ್ಖತನವನ್ನು ಕಟ್ಟಿಕೊಂಡಿದ್ದರಿಂದ ಇಂಡಿಯಾದೇಶ ಇಷ್ಟು ದಿವಸವು ಉಳಿಯುತ್ತಿರಲಿಲ್ಲ. ಪೂಜ್ಯರಾದ ಶಿವಾಜಿ ಮಹಾರಾಜರು ಯಾವ ಜಾತಿಯವರು ಮತ್ತು ಅವರು ಎಷ್ಟು ಜನ ಬ್ರಾಹ್ಮಣರನ್ನು ಹಾಳುಮಾಡಿದರು, ಮಹಾನುಭಾವರಾದ ಲೋಕಮಾನ್ಯ ತಿಲಕರು ಬ್ರಾಹ್ಮಣೇತರರ ಸೇವೆಯಲ್ಲಿಯೇ ತಮ್ಮ ಜೀವವನ್ನು ಬಿಡಲಿಲ್ಲವೆ!

—ಐರಾವತೀ ನದೀಮುಖಜ ಭೂಮಿ ಹತ್ತಿರ ಹುಟ್ಟಿದ ಐದು ವರುಷ ವಯಸ್ಸಿನ ಖರ್ಮಾದೇಶಸ್ಥನಾದ ಟುಕ್-ಕೀಕ್ ಎಂಬುವನು ಒಬ್ಬ ಬೌದ್ಧಮತದ ತತ್ವಜ್ಞಾನಿಯ ಅವತಾರ ಪುರುಷನೆಂದು ಭಾವಿಸಲ್ಪಟ್ಟಿರುತ್ತಾನೆ. ಈ ಬಾಲಕನು ಮಹಾತತ್ವಗಳನ್ನೊಳಗೊಂಡ ದೊಡ್ಡ ದೊಡ್ಡ ಉಪನ್ಯಾಸಗಳನ್ನು ಮಾಡುತ್ತಿರುವನೆಂತಲೂ ಬೌದ್ಧಮತ ತತ್ವವನ್ನು ಜನರಿಗೆ ಭೋದಿಸುತ್ತಿರುವನೆಂದೂ ಇವನ ಉಪನ್ಯಾಸ ಕೇಳಲು ಬಹುದೂರದಿಂದ ಜನರು ಸೇರುತ್ತಿರುವರೆಂದೂ ವರ್ತಮಾನ ಬಂದಿದೆ.

—ಅಲಿಪುರದ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಶೋನಾರಾಯಣ ಕೈರಿ ಎಂಬೊಬ್ಬನು ಅಬ್ದುರ್ ರಹಮಾನ್ ಎಂಬುವನ ಮೇಲೆ ಫಿರ್ಯಾದು ಮಾಡಿದ್ದನು. ಕಳೆದ ೧೨ನೇ ತಾರೀಖಿನ ದಿವಸ ಈ ಮೊಕದ್ದಮೆಯ ಹೀರಂಗು ಇತ್ತು. ಅಬ್ದುರ್ ರಹಮಾನನು ಒಂದು ಚೂರಿಯಿಂದ ಫಿರ್ಯಾದಿ ನಾರಾಯಣನ ಕತ್ತನ್ನು ಕತ್ತರಿಸಿ ಓಡಿಹೋದನು. ರಕ್ತವು ಪ್ರವಾಹದಂತೆ ಹರಿಯಲಾರಂಭಿಸಿತು. ಅವನ ಹೆಂಡತಿಯೂ ಒಬ್ಬ ಯೂರೋಪಿಯನ್ ಸಾರ್ಜೆಂಟೂ ರಕ್ತಪ್ರವಾಹವನ್ನು ನಿಲ್ಲಿಸಲು ಪ್ರಯತ್ನಪಟ್ಟರು. ಆದರೆ ಅವರ ಪ್ರಯತ್ನವು ವಿಫಲವಾಯಿತು. ಆತನನ್ನು ಆಸ್ಪತ್ರೆಗೆ ಸಾಗಿಸುತ್ತಿರುವಾಗ ಮಾರ್ಗದಲ್ಲಿಯೇ ಪ್ರಾಣಬಿಟ್ಟನು. ಆಪರಾಧಿಯನ್ನು ಈಚೆಗೆ ದಸ್ತಗಿರಿಮಾಡಿರುತ್ತಾರೆ.

—ಕಳೆದ ೧೯ನೆಯ ತಾರೀಖಿನ ರಾತ್ರೆ ನಾಗಪುರದ ಮಧ್ಯಪ್ರಾಂತ್ಯದ ಕಾಟೋಲಿನ ತಾಸೀಲುದಾರನೂ ಮ್ಯಾಜಿಸ್ಟ್ರೇಟೂ ಆದ ರಾವ್ ಸಾಹೆಬ್ ನಿಂಬಾಲ್ಕರ್ ಎಂಬಾತನು ತನ್ನ ಸ್ನೇಹಿತನೊಂದಿಗೆ ಮಾತನಾಡುತ್ತಿದ್ದಾಗ ಕೆಲವು ಜನರು ಅವನನ್ನು ಗಳುಗಳಿಂದಹೊಡೆದರು. ಅವರನ್ನು ಕೂಡಲೆ ದಸ್ತಗಿರಿಮಾಡಿದರು. ಏಟಿನಿಂದ ಜ್ಞಾನತಪ್ಪಿಹೋಗಿದ್ದ ಮ್ಯಾಜಿಸ್ಟ್ರೇಟರನ್ನು ಆಸ್ಪತ್ರೆಗೆ ಸಾಗಿಸಿದರು.

—ಆಳ್ವಾರ್ ಸಂಸ್ಥಾನದ ಒಂದು ಸರ್ಕಾರಿ ಹುಕ್ಕುಂನ್ನು ಪ್ರತಿಭಟಿಸಲು ಬಂದು ಸಭೆ ಸೇರಿರಲು ಸಂಸ್ಥಾನದ ಸಿಪಾಯಿಗಳು ಈ ಗುಂಪಿನಮೇಲೆ ತುಪಾಕಿ ಹಾರಿಸಿದರು. ಅನೇಕರಿಗೆ ಗಾಯವಾಗಿರುತ್ತೆ.

—ಕರಾಚಿಯಲ್ಲಿ ಒಬ್ಬ ಬ್ರಾಹ್ಮಣ ಹೆಂಗಸು ತನ್ನ ಗಂಡನನ್ನು ಬಿಟ್ಟು ಬೆಟ್ಟು ತುರುಕರವನ ಹತ್ತಿರ ವಾಸಿಸುತ್ತಿದ್ದಳು. ಗಂಡನು ಹೆಂಡತಿಯಮೇಲೆ ಒಡವೆವಸ್ತು ಕಳವಿಗೂ ತುರುಕನಮೇಲೆ ಮದುವೆಯಾದ ಹೆಂಗಸನ್ನು ಹಾರಿಸಿಕೊಂಡುಹೋದ ತಕ್ಸೀರಿಗೂ ಫಿರ್ಯಾದು ತಂದನು. ಕೋರ್ಟಿಗೆ ಸುಮಾರು ೫೦೦೦ ಜನರು ದೊಣ್ಣೆಗಳನ್ನು ಹಿಡಿದುಕೊಂಡು ಬಂದಿದ್ದರು. ಆದರೆ ಪೋಲೀಸಿನವರು ಬುದ್ಧಿವಂತಿಕೆಯಿಂದ ಅವರನ್ನು ಕಳುಹಿಸಿದರು.

—ದಕ್ಷಿಣ ಇಂಡಿಯಾದಲ್ಲಿ ಪ್ರಸಿದ್ಧ ಧನಿಕನಾಗಿದ್ದ ಸೂಳೂರು ಸುಬ್ಬರಾಯರ ಖೂನಿ ಮೊಖದ್ದಮೆಯ ವಿಚಾರಣೆಯು ತಿರುವೂರಿನಿಂದ ೧೦ ಮೈಲಿ ದೂರದ ಪಲ್ಲಡಂ ಎಂಬ ಸ್ಥಳದಲ್ಲಿ ಸಬ್ ಮ್ಯಾಜಿಸ್ಟ್ರೇಟರ ಮುಂದೆ ಪ್ರಾರಂಭವಾಗಿದೆ. ಈ ಖೂನಿಮಾಡಿರುವರೆಂಬ ಆಪಾದನೆಯ ಮೇಲೆ ೭ ಜನರಮೇಲೆ ಮೊಖದ್ದಮೆ ನಡೆಯುತ್ತಿದೆ.

—ಲಾಹೋರಿನ 'ಸರ್ದಾರ್' ಪತ್ರಿಕೆಯ ಸಂಪಾದಕ, ಮತ್ತು ಪ್ರಕಾಶಕನಾದ ನೌಗ್ ಎಂಬಾತನು, ತನ್ನ ಪತ್ರಿಕೆಯಲ್ಲಿ ಅವಹೇಳನವಾದ ಜಾಹೀರಾತು ಪ್ರಕಟಿಸಿದನೆಂದು ಪೀನಲ್‌ಕೋಡು ೫೦೫ನೇ ಸೆಕ್ಷನ್ ಮೇಲೆ, ಆತನ ಮೇಲೆ ಖಟ್ಲೆ ನಡೆಯುತ್ತಿದೆ. ಈ ಅಪರಾಧಿಯು ಮ್ಯಾಜಿಸ್ಟ್ರೇಟರಮುಂದೆ ಬಂದು ಸ್ಟೇಟ್‌ಮೆಂಟನ್ನು ಕೊಟ್ಟಿರುತ್ತಾರೆ. ಅದರ ಪ್ರಕಾರ ಆ ಪತ್ರಿಕೆಯ ಮ್ಯಾನೇಜರಾದ ಥಾಕರ್‌ಸಿಂಗ್ ಎಂಬಾತನಿಂದ ಕೆಲಸಕ್ಕೆ ನೇಮಿಸಿಕೊಳ್ಳಲ್ಪಟ್ಟನೆಂದೂ ತಾನು ಒರೀ ಪತ್ರಿಕೆಗಳನ್ನು ಮಾರುತಿದ್ದನೆಂದೂ ಇಲ್ಲಿ ಪ್ರಕಟಿಸಲ್ಪಟ್ಟ ಪತ್ರಿಕೆಗಳನ್ನು ಏಜಂಟರಿಗೂ, ಬೀದಿಬೀದಿಯಲ್ಲಿ ಮಾರುವವರಿಗೂ ತೆಗೆದುಕೊಂಡು ಹೋಗುತಿದ್ದುದು ಮಾತ್ರ ತನ್ನ ಕರ್ತವ್ಯವಾಗಿತ್ತೆಂದೂ ತಿಳಿಸಿದನಲ್ಲದೆ, ಈ ಮ್ಯಾನೇಜರು ಒಂದು ಪತ್ರಿಕೆಯಲ್ಲಿ ರುಜು ಹಾಕಿಸಿಕೊಂಡನೆಂದೂ, ಆಗ ಅವನು ಈ ಪತ್ರಿಕೆಯು ಸರ್ಕಾರದ್ದೆಂದು ತಿಳಿಸಿದನೆಂದೂ, ಆಗ ಆಪರಾಧಿಯು ಉರ್ದುಭಾಷೆಯ ಡಿಕ್ಲರೇಷನ್ ಫಾರಂಗೆ ರುಜು ಹಾಕಿದನೆಂದೂ, ತನಗೆ ಇಂಗ್ಲೀಷ್ ಆಗಲೀ ಉರ್ದುವಾಗಲೀ ಓದಲೂ ಬರೆಯಲೂ ಬಾರದೆಂದೂ, ಉರ್ದುವಿನಲ್ಲಿ ಕೇವಲ ತನ್ನ ರುಜು ಮಾತ್ರ ಮಾಡಬಲ್ಲನೆಂದೂ ತಿಳಿಸಿರುತ್ತಾನೆ.

—ಚಿಟ್ಟಗಾಂಗಿನಲ್ಲಿರುವ ಒಂದು ಮಾರ್ವಾಡಿ ಕಂಪನಿಯಲ್ಲಿ ಅದೇ ಡಿಸ್ಟ್ರಿಕ್ಟಿನಲ್ಲಿರುವ ರಾಜಾ ನಿರುಸೇನನೆಂಬ ಭಾರಿ ಜಮೀನುದಾರನು ೧೦೦೦ ರೂಪಾಯಿಗಳನ್ನು ಸಾಲವಾಗಿ ಪಡೆದು ಅದಕ್ಕೆ ವರ್ಷಕ್ಕೆ ಶೇ ೬ಕ್ಕೆ ೪೪೦ ರೂಪಾಯಿಗಳಂತೆ ಬಡ್ಡಿ ಕೊಡುವುದಾಗಿ ಪತ್ರ ಬರೆದುಕೊಟ್ಟನೆಂದೂ, ವಾಯಿದೆಮುಗಿಯುತ್ತಾ ಬಂದು ಹಣಕೊಡಬೇಕಾಗಿ ಬಂದಾಗ ಅಷ್ಟು ಹೆಚ್ಚು ಬಡ್ಡಿ ಸೇರಿಸಿ ತಾನು ಪತ್ರ ಬರೆದು ಕೊಡಲಿಲ್ಲವೆಂದು ಜಮೀನ್ದಾರನು ಹೇಳಿದನು. ಅಲ್ಲಿನ ಕೋರ್ಟಿನಲ್ಲಿ ವಿಚಾರಣೆ ನಡೆದು, ಜಮೀನ್ದಾರನು ಸಮಯಕ್ಕೆ ಹಣವನ್ನು ಕೊಟ್ಟ ಮಾರ್ವಾಡಿಗೆ ಹೆಚ್ಚಿಗೆ ಬಡ್ಡಿ ಕೊಟ್ಟದ್ದು ಉರಟೆಂದೂ. ಅದರಂತೆಯೇ ಬಡ್ಡಿಯನ್ನು ಪಾವತಿ ಮಾಡಬೇಕೆಂದೂ ತೀರ್ವಾಯಿತೆಂದೂ ತಿಳಿಯಬಂದಿದೆ.

—ನಾಳೆಯ ದಿನ ಚಿಕ್ಕಬಳ್ಳಾಪುರದ ತಾ ಗ್ರಾಮದಲ್ಲಿ ಕೋಲಾರ ಡಿಸ್ಟ್ರಿಕ್ಟು ಬ್ರಾಹ್ಮ ಸಭೆಯು ನಮ್ಮ ದಿವಾಕರವರ ಬಾನರ್ಜಿಯವರಿಂದ ಪ್ರಾರಂಭಿಸಲ್ಪಡುವುದು ನಡೆಯುವುದು.

“ ಸ ತ್ಯ ವಾ ದಿ ”

೨೯ ನೆ ಮೇ ೧೯೨೫

ಸ್ತ್ರೀವ್ಯಾಮೋಹದ ಫಲಿತಾಂಶ,

ಬಾ ಲಾ ಖೂ ನಿ .

ಪುರಾಣೇತಿಹಾಸಗಳಲ್ಲಿನ ಕಥೆಗಳು ಕಲಿಕಾಲದಲ್ಲಿ ದರ್ಶನವಾಗುತ್ತಿರುತ್ತವೆಂಬುದು ಈ ಘೋರಕೃತ್ಯ ಂದ ದೃಢೀಕರಿಸಲ್ಪಟ್ಟಿರುತ್ತೆ ರಾವಣಾದಿ ರಾಕ್ಷ ರು ಸ್ತ್ರೀವ್ಯಾಮೋಹದಿಂದ ಪಡೆದ ಪರಿಣಾಮವು ರ್ವಜನಿತವಾಗಿದೆ. ಆ ಕಾಲದಲ್ಲಿ ಅಂತಹ ಶಕ್ತಿ ಾಹಸಗಳೊಡಗೂಡಿ ಲೋಕೋದ್ಧಾರಕ್ಕೆ ಕಾರಣ ೂತರಾಗಿ ಜನಸಮುದಾಯಕ್ಕೆ ನೀತಿಯನ್ನು ಪದೇಶಿ ುವಂತೆ ನಡೆಸಿದ ಮಹತ್ಕಾರ್ಯವಾಗಿರುತ್ತೆ. ಆದರೆ ೀಗಿನ ನವನಾಗರೀಕ ಕಾಲದಲ್ಲಿ ಬುದ್ಧಿಯು ವಿಕಲ್ಪ ಾಗುತ್ತಾ ಬಾಹ್ಯಾಡಂಬರಗಳಲ್ಲಿ ಮಗ್ನವಾಗುತ್ತಾ ಿಷಯಲಂಪಟದಲ್ಲಿ ಆಸಕ್ತಿಹೊಂದಿ ಇಂತಹ ಘೋರ ೃತ್ಯಗಳನ್ನು ನಡೆಸುವದರಲ್ಲಿ ಉತ್ಸಾಹ ಉಂಟಾಗು ಬರುವದು ಬಹು ವಿಷಾದಕರವಾಗಿರುತ್ತದೆ.

ಬೊಂಬಾಯಿನ ಧನಿಕನಾದ ಬಾವ್ಜಾ ಎಂಬಾತನ ಾಣಿಯು ಉದಾಹರಣವಾಗಿರುತ್ತದೆ. ಈ ಕಾರ್ಯಕ್ಕೆ ಮುಮ್‌ತಾಜ್ ಎಂಬ ವೇಶ್ಯಾಂಗನೆಯೇ ಮೂಲ ಾರಣಳು. ಈಕೆಯು ಎಷ್ಟೇ ಧನಿಕಳಾಗಲೀ ರೂಪವತಿ ಯೂ ಆದಾಗ್ಯೂ ಜಾತಿಯಲ್ಲಿ ವೇಶ್ಯಾಂಗನೆಯಾಗಿ ೀಕೆಯ ಪಾತಕ್ಕೆ ಕಟ್ಟುಬಿದ್ದ ಪುರುಷಶ್ರೇಷ್ಠರ ಪರಿ ಣಾಮವು ತಿಳಿಯಲು ಬಹುಹೃದಯವಿದಾರಕವಾಗಿರುತ್ತೆ. ೀ ವಿಷಯವು ಭರತಖಂಡವನ್ನೆಲ್ಲಾ ಹರಡಿರುವುದಲ್ಲದೆ ುದೇಶದಲ್ಲಿಯೂ ಬಹುಗಲಭೆಯನ್ನುಂಟುಮಾಡಿರುತ್ತೆ ೀ ಘೋರ ಕೃತ್ಯವು ಭರತ ಚರಿತೆಯಲ್ಲಿ ಬಹು ಹೇ ುವಾದುದು. ಈ ವೇಶ್ಯಾಂಗನೆಯ ವಿಷಯಲಂಪಟ ್ಕಿಳಗಾದ ಬಾಲಾ ಎಂಬುವನು ತನ್ನ ಪ್ರಾಣವನ್ನ ರ್ಪಿಸಿದನು. ಈಕೆಯ ಜಾಲದಲ್ಲಿ ಮೊಟ್ಟಮೊದಲು ಿಕ್ಕಿಕೊಂಡಿದ್ದ ರಾಜರನ್ನು ಈಕೆಯು ತೃಣೀಕರಿಸಿ ಳು. ವೇಶ್ಯಾಂಗನೆಯ ಮಹತ್ವ ಎಂತಹದುದು ! ಇದನ್ನು ಬಾಲಾ ಮೊಕದ್ದಮೆಯ ಫಲಿತಾಂಶದಿಂದ ಿಳಿಯಬಹುದು. ದ್ರವ್ಯಹಾನಿ, ಮಾನಹಾನಿ, ಪ್ರಾಣ ಹಾನಿ ಬಹುಮತವಾಗಿ ಉಂಟಾಗಿದೆ ಎಂಬುದು ಹೇ ೇಕಾದುದೇ ಇಲ್ಲ. ಬೊಂಬಾಯಿ ಹೈಕೋರ್ಟಿ ಲ್ಲಿ ಈ ಮೊಕದ್ದಮೆಯು ವಿಚಾರಣೆಯಾಗಿ ಈಕೆ ೀಸುಗ ಈ ಘೋರಕೃತ್ಯ ನಡೆಸಿದ ಅಪರಾಧಿಗಳ ಮೂವರು ಮರಣದಂಡನೆಯನ್ನೂ ನಾಲ್ವರು ಾಂತರವಾಸವನ್ನೂ ಹೊಂದಿದರು. ಈ ಕೃತ್ಯ ವರೇ ಕಾರಣಭೂತರೆಂಬುದು ಹೇಳಲಾಗುವು ಇದಕ್ಕೆ ನಿಜವಾಗಿ ಉತ್ತೇಜನ ಕೊಟ್ಟವರು ನಲ್ಲಿದ್ದುಕೊಂಡು ತಮ್ಮ ಸೇವಕರ ಮೂಲಕ ೆಂಬುದು ಅಪರಾಧಿ ವಕೀಲರು ಕೋರ್ಟಿ ಗೂಡಿಕೊಂಡಿದುದರಿಂದ ಸ್ಪಷ್ಟಪಡುತ್ತೆ. ಜ್ಞಾಪಿಸಿಕೊಂಡಿದ್ದೀನೆಂದರೆ “ ಮ ಕರುಣವನ್ನೀಡು ! ಈ ಅಪರಾಧಿ ನಡೆಸಿದ ಕೃತ್ಯವಲ್ಲ. ಸ್ವಾಮಿ ಕಾರ್ಯ ನಿರ್ವಾಹಕರು ! ಪ್ರಬಲಶಕ್ತಿಯಿಂದ ಪ್ರೇರಿತ ರಾದವರು. ಇದರ ಬಲದಿಂದ ತಮ್ಮ ಮನಸ್ಸಾಕ್ಷಿಗೆ ವಿರೋಧವಾಗಿ ನಡೆಯಿಸಿದ್ದಾಗಿರುತ್ತೆ. ಆದುದರಿಂದ ಕರುಣಿಸಿ ಪ್ರಾಣದಾನಮಾಡಬೇಕು ” ಎಂದು ವಾ ದಿಸಿದರು. ಆದುದರಿಂದ ನಿಜಾಂಶವು ಮರೆಮಾಚಿದೆ ಎಂಬುದು ಖಂಡಿತವಾಗುತ್ತದೆ. ಆದುದರಿಂದ ನಮ್ಮ ಘನ ಇಂಡಿಯಾ ಸರ್ಕಾರದವರು ನಿಜಸ್ಥಿತಿಯನ್ನು ಕೂಲಂಕುಶವಾಗಿ ವಿಚಾರಿಸಿ ಹೊರಪಡಿಸಿ ನಿಜವಾದ ಕಾರಣಭೂತರನ್ನು ಸತ್ಯದಲ್ಲಿ ಮನವಿಟ್ಟು ಗೋಪ್ಯ ದಿಂದೀಜೆಗೆ ಸೆಳೆದು ಅವರು ಯಾರೇ ಆಗಲಿ ತಪ್ಪಿತ ಸ್ಥರಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಜನಸಮುದಾಯದ ಕಳವಳವನ್ನು ತಪ್ಪಿಸಿ ಸಮಾಧಾನವನ್ನುಂಟುಮಾಡಿ ಇತೋಪ್ಯತಿಶಯವಾದ ಕೀರ್ತಿಪಡೆಯುವುದರಲ್ಲಿ ಹಿಂದೆಗೆಯುವುದಿಲ್ಲವೆಂದು ಸಂಪೂರ್ಣ ನಂಬಿರುತ್ತೆ.

‘ಅತಿಕಾಮಾರ್ಗತಿ ಹಾನಿಯೈ’

ಶಿ ಪಾ ಯಿ ಗ ಳು

ಸ್ವರಾಜ್ಯದಲ್ಲಿ ಶಿಪಾಯಿಗಳಿರಬೇಕೇ ಬೇಡವೇ ಎಂಬ ಪ್ರಶ್ನೆಗೆ ಮಹಾತ್ಮಾ ಗಾಂಧಿಯವರ ಪ್ರತ್ಯು ತ್ತರವು.

ಅಯ್ಯೋ ! ಈಗ ನನ್ನ ಸ್ವರಾಜ್ಯದಲ್ಲಿ ಶಿಪಾಯಿ ಗಳ ಜರೂರಾತಿಯಿರುವದು ವಾಸ್ತವವೇ ? ಪ್ರಜೆಗಳ ಹಸ್ತದಲ್ಲಿನ ಕತ್ತಿಗಳನ್ನು ಕಿತ್ತುಕೊಂಡು, ಭಾರತ ಜನರನ್ನೇ ನಿರ್ವೀರ್ಯರನ್ನಾಗಿ ಮಾಡುವುದರಲ್ಲಿ ಬ್ರಿಟಿ ಷರವರು ಮಹಾಘೋರವಾತಕವನ್ನು ನೆರವೇರಿಸು ತ್ತಾರೆಂಬದಾಗಿ ನಾನು ಹಿಂದೆಯೇ ಹೇಳಿರುತ್ತೇನೆ. ದೇಶವೆಲ್ಲಕ್ಕೂ ಸಂಪೂರ್ಣವಾಗಿ ಸರ್ವತೋಮುಖ ವಾದ ಅಹಿಂಸಾತತ್ವವನ್ನು ಪದೇಶಿಸುವುದರಲ್ಲಿ ನಾನು ಸಮರ್ಥನಲ್ಲ. ಆದ್ದರಿಂದ ದೇಶಸ್ವಾತಂತ್ರ್ಯ ಸಂಪಾ ದನೆಗಾಗಿಯೂ, ಅಂತರ್ಜಾತೀಯ ವ್ಯವಹಾರ ಪರಿ ಷ್ಕರಣಕ್ಕಾಗಿಯೂ, ಈಗ ನಾನು ಅಹಿಂಸಾ ಪದ್ಧತಿ ಯನ್ನು ನಿಯಮಿತವಾಗಿ ಹೇಳಬೇಕಾದವನಾಗಿರುತ್ತೇ ನೆ. ಅಷ್ಟು ಮಾತ್ರದಿಂದಲೇ ನನ್ನ ಅಸಾಮರ್ಥ್ಯವು ಅಹಿಂಸಾತತ್ವಕ್ಕೆ ಲಗತ್ತಾಗತಕ್ಕದ್ದಲ್ಲ. ಅದರ ಸಂ ಪೂರ್ಣ ತೇಜಸ್ಸನ್ನು ನಾನು ನನ್ನೆ ಬುದ್ಧಿಬಲದಿಂದ ನೋಡುತ್ತಲಿದ್ದೇನೆ. ನನ್ನ ಹೃದಯವು ಅದನ್ನೇ ಆಶಿ ಸುತ್ತಲಿದೆ. ಆದಾಗ್ಯೂ ಸರ್ವತೋಮುಖವಾಗಿಯೂ ದಿವ್ಯವಾಗಿಯೂ ಇರತಕ್ಕ ಅತಿತಪ್ಪೆ ಸಂಪೂರ್ಣ ಅಹಿಂಸಾತತ್ವವು ಫಲಪ್ರದವಾಗುವ ರೀತಿಯಲ್ಲಿ ಲೋಕಕ್ಕೆಲ್ಲಾ ಉಪದೇಶಿಸಬಹುದಾದ ಸಾಮರ್ಥ್ಯ ವು ನನಗಿನ್ನೂ ಲಭ್ಯವಾಗಿರುವುದಿಲ್ಲವು. ಇಂತಪ್ಪ ಮಹತ್ಕಾರ್ಯವನ್ನು ಕೈಗೊಳ್ಳುವಷ್ಟರ ಮಟ್ಟಿನ ಉನ್ನತ ಸ್ಥಿತಿಗೆ ನಾನಿನ್ನೂ ಬಂದಿಲ್ಲ. ನನ್ನಲ್ಲಿನ್ನೂ ಕೋಪ ವಿದೆ, ದ್ವೇಷಭಾವವಿದೆ. ನನ್ನಲ್ಲಿರತಕ್ಕ ಕಾಮಕ್ರೋ ಧಾದಿಗಳನ್ನು ಅಣಗಿಸಿ ಕೊಳ್ಳುತ್ತಲಿದೇನೆ. ಅಷ್ಟೇ ಹೊರ್ತು ಈ ಕಾಮಕ್ರೋಧಾದಿಗಳ ಹೆಸರೇ ಇಲ್ಲದ ರೀತಿಯಲ್ಲಿ ನಾಶವನ್ನು ಹೊಂದಿಸಿ, ನಾನು ಸರ್ವ ಸ್ವತಂತ್ರನಾಗಬೇಕು, ಆಗ ನಾನು ಸರ್ವತೋಮುಖ ವಾಗಿ ಅಹಿಂಸೆಯನ್ನು ಲೋಕಕ್ಕೆಲ್ಲಾ ಉಪದೇಶಿಸ ಲಾಗುವೆನು. ಪಾಪವೆಂಬುವುದನ್ನು ಮಾಡುವುದರಲ್ಲಿ ನನಗೆ ಸ್ವಲ್ಪವೂ ಅವಕಾಶವಿಲ್ಲದಂತಾಗಬೇಕು. ಶೀಘ್ರ ದಲ್ಲಿ ನನಗಷ್ಟು ಉತ್ತಮ ಸ್ಥಿತಿಯುಂಟಾಗಲೆಂದು ಎಲ್ಲ ವಕಾರರೆಲ್ಲರೂ ನನ್ನ ಜೊತೆಯಲ್ಲಿ ನನಗೋಸ್ಕರ ವಾಗಿ ಭಗವಂತನನ್ನು ಪ್ರಾರ್ಥಿಸಬೇಕು. ಪ್ರಕೃತ ಇಷ್ಟು ಉತ್ತಮ ಸ್ಥಿತಿಗೆ ಸೇರುವುದಕ್ಕಾಗಿ, ವಿಷ್ಣವ ಕಾರರು ನನ್ನ ಜೊತೆಯಲ್ಲಿ ಮಧ್ಯದ ಪಡಿಯೇರುವು ವುದಕ್ಕೆ ಆರಂಭಮಾಡಿ, ನನ್ನನ್ನು ಹಿಂಬಾಲಿಸುವವ ರಾಗಲಿ ! ಅಹಿಂಸಾ ಪದ್ಧತಿಯ ಅವಲಂಬನೆಯಿಂದ ಭಾರತದೇಶದ ಮೋಕ್ಷವನ್ನು ಸಾಧಿಸತಕ್ಕದ್ದೇ ಆ ಮಧ್ಯದ ಮೆಟ್ಟಿಲು. ಈ ಮೆಟ್ಟಿಲಿನ ಜಾಡು ನನ್ನ ಕಣ್ಣಿಗೆ ಚೆನ್ನಾಗಿ ಗೋಚರಿಸುತ್ತಲಿದೆ. ಸ್ವರಾಜ್ಯ ಪ್ರಾಪ್ತ ವಾದ ವೇಳೆಯಲ್ಲಿ, ಆಗ, ನಾನಾಗಲೀ, ಮತ್ತೊಬ್ಬ ರಾಗಲೀ, ಇದಕ್ಕಿಂತಲೂ ಉತ್ತಮವಾದ ಮಾರ್ಗ ವನ್ನು ತೋರಿಸದೇಹೋದ ಸಂದರ್ಭದಲ್ಲಿ, ವಿದ್ಯಾ ವಂತರೂ, ಮೇಧಾವಿಗಳೂ, ಸುಶೀಲರೂ ಆದ ಒಳ್ಳೆ ಯ ಪೋಲೀಸ್ ದಳವು ದೇಶವನ್ನೇ ಬಹಿರಂ ತಃಕಲ್ಲೋಲಿಗಳಿಂದ ಸಂರಕ್ಷಿಸುತ್ತಿರುವದಾದರೆ ಆಗ್ಗೆ ನಾವೂ ನೀವೂ ಹಾಯಾಗಿ ಬದುಕುತ್ತೇವೆ.

ಪ ಶು ಹಿ ಂ ಸೆ—ಹೃದಯದ್ರಾವಕ ವಾರ್ತೆ

ಸಿಡ್ನಿ. ಹೆಚ್. ಬಿಯಡ್ರ್ಡ್ ಎಂಬ ಆಂಗ್ಲೇಯ ದೇಶಜನ ಅಭಿಪ್ರಾಯ—ಎರಡು ಲೈನಾಗಿ ೧೫ ಮೈಲಿ ಉದ್ದಕ್ಕೆ ೧೦ ಸಹಸ್ರ ಪಶುಗಳು, ಅವುಗಳ ಹಿಂದು ಗಡೆಯಲ್ಲಿ ೨೦ ಸಹಸ್ರ ಕುರಿಗಳು, ಆಡುಗಳು. ೧೫ ಮೈಲಿ ಉದ್ದಕ್ಕೆ ೨೭ ಸಹಸ್ರ ಹಂದಿಗಳು, ಆರು ಮೈಲಿ ಉದ್ದಕ್ಕೆ ೩೦ ಸಹಸ್ರ ಕೋಳಿಗಳು, ಈ ಮೇರೆ ಒಂ ದು ದೊಡ್ಡ ಮೈದಾನದಲ್ಲಿ ೫೦ ಮೈಲಿ ಸುತ್ತಳತೆಯ ಲ್ಲಿ ಸೇರಿಸಿ, ಲಂಡ್ ಸ್ವಿಫ್ಟ್ ಅಂಡ್ ಕಂಪನಿಯವರು ಹತಮಾಡಿ ಅವುಗಳ ಕೆಚಡಿಯನ್ನು ಡಬ್ಬಾಗಳಲ್ಲಿ ತುಂಬಿ ಇತರ ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಇದೆಷ್ಟು ಘೋರಕೃತ್ಯವೋ ಆಲೋಚಿಸಿರಿ. ಆದೇ ಮೈದಾನದಲ್ಲಿ ಒಂದುಕಡೆಯಿಂದ ಇನ್ನೊಂದುಕಡೆಗೆ ಹೋಗುವುದಕ್ಕೆ ಸಾಮಾನ್ಯವಾಗಿ ೨ ದಿವಸಗಳ ಕಾಲ ಹಿಡಿಯತಕ್ಕದ್ದಾಗಿದೆ.

ವೃ ತ್ತಾ ಂ ತ ಸ ಂ ಗ್ರ ಹ

—ಫಿಲಿಫೈನಿಲ್ಲಿ ಒಂದು ವಿಧವಾದ ಮಾನುಗಳಿವೆ ಯೆಂದೂ, ಅವು ಸಣ್ಣ ಕೆರೆ, ನದಿಗಳಲ್ಲಿ ಸಿಕ್ಕುತ್ತವೆಂ ದೂ, ಅವು ಭೂಮಿಯ ಮೇಲೂ ಸುಖವಾಗಿ ಸಂಚರಿಸ ಬಲ್ಲವೆಂದೂ, ಬಹು ಹೊತ್ತು ಅಂದರೆ ೬ ದಿನಗಳವರಿಗೆ ನೀರಿನ ಹೊರಗೇ ಇರಬಲ್ಲವೆಂದೂ, ಅವು ಮರಹತ್ತು ವುದೆಂದೂ, ಫಿಲಿಫೈನಿನ ಫಿಷರೀ ಮುಖ್ಯಸ್ಥರ ಹೇಳಿಕೆ ಯಿಂದ ತಿಳಿಯ ಬಂದಿದೆ.

—೫೦೦ ವರ್ಷಗಳಿಗೆ ಮೇಲ್ಪಟ್ಟ ಒಂದೇ ಕಸಬಿನಿಂ ದ ಜೀವಿಸುತ್ತಿರುವ ವಂಶೀಯರಿಗೆ ಫ್ರೆಂಚ್ ಸರ್ಕಾರ ದವರು ಬಹುಮಾನವನ್ನು ಈಚೆಗೆ ಕೊಟ್ಟಿರುವರಂತೆ. ಮದನಾಸಿನಲ್ಲಿ ಒಬ್ಬಾನೊಬ್ಬ ಪಂಕ ಎಳೆಯುವನನ್ನು ಮಿ|| ಗಾಂಟ್ ಡಫ್ಟಿನ ಸ್ನೇಹಿತಳು ಅವನನ್ನು ಯಾಕೆ ಇದೇ ಕಸಬಿನಲ್ಲಿರುವೆಯೆಂದು ಕೇಳಲು, ಅವನು ಹೇಳಿದ್ದೇನೆಂದರೆ ನಮ್ಮ ತಂದೆ, ಪಂಕಾ ಎಳೆಯುತಿದ್ದ ನಮ್ಮ ತಾತ ಅದೇ ಕಸಬಿನವನು; ನಮ್ಮ ಹಿಂದಿನ ವಂ ಶೀಕರೆಲ್ಲರೂ ೪೦ ಕೋಟಿ ವರ್ಷದವರಿಗೂ ಪಂಕ ಎಳೆಯುವವರೇ; ಅದಕ್ಕೆ ಮುಂಜೆ; ನಮ್ಮ ಜಾತಿ ಸ್ಥಾ ಪಿಸಿದ ದೇವರೂ ಕೂಡ ವಿಷ್ಣುವಿಗೆ ಪಂಕಾ ಬೀಸುತಿ ದ್ದನು.

TO LET

Permanent Advertisers

To Popularise your Business

in the Karnataka Provinces

YOU MUST ADVERTISE IN

the "SATYAVADI"

BECAUSE

It is the cheapest and mostup-to-date Karnatic Weekly

It is read largely and widely

Itis circulated among all grades of persons

It offers a profitable medium for advertising

Advertisement in this Paper is a good investment

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column mea sures about 13"×2½". 3columns to a page. Voucher copy supplied free.

All communications & remittances to be addressed to

The Manager,
SATYAVADI Office,
Mysore, S. India.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-6

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾಯಿತು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಪರತ್ತಿಗೂ ಕಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್
927 ಚಾಮರಾಜ ಪುರಂ, ಮೈಸೂರು.

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಂಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಪರಬತ್ತುಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಕಡಮೆಯಾಗಿಯೂ, ಪದಾರ್ಥಗಳು ನಂಬಿಕೆಯಾಗಿಯೂ ಇರುತ್ತವೆ. ಅಪೇಕ್ಷಿಸುವವರು ತರಿಸಿಕ್ಕೊಳ್ಳಬೇಕಾಗಿ ಪ್ರಾರ್ಥನೆ. [22-6]

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿಗಳು, ಮೈಸೂರು

ಕಾದಂಬರೀ ಸಂಗ್ರಹ

ಮನೋಹರವಾದ ಕರ್ನಾಟಕ ಮಾಸಪತ್ರಿಕೆ

ಚಾಮರಾಜನಗರ

THE
MYSORE PRESS
RAMAVILAS ROAD
MYSORE

We undertake to print

JOBS — BOOK & PERIODICALS

Neat Workmanship

Moderate Charges

Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ

ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

ದಯವಿಟ್ಟು ಗಮನಿಸಿ:—
ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಚಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ

ಬಿ. ಎಸ್. ಮೂರ್ತಿ,
ಪ್ರೊಪ್ರೈಟರ್

Printed and Published by B.S. at the Mysore Press, Mysore, and Proprietor